ಕ್ರ.ಸ. A

# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ವೈ. ಎಂ ಸತೀಶ್ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಕುರಿತು.

**ಪ್ರಶ್ನೆ :** ಬಳ್ಳಾರಿ ನಗರಸಭೆ ವ್ಯಾಪ್ತಿಯಲ್ಲಿ ದಿನಾಂಕ:07.02.2023ರಂದು ಬೀದಿ ನಾಯಿಯೊಂದು ಸುಮಾರು 21ಕ್ಕೂ ಹೆಚ್ಚಿನ ಜನರಿಗೆ ಕಚ್ಚಿ ಗಾಯಗೊಳಿಸಿರುವ ಘಟನೆ ನಡೆದಿದ್ದು ಈ ಕುರಿತು ರಾಜ್ಯದ ಹಲವು ದಿನ ಪತ್ರಿಕೆಗಳಲ್ಲಿ ವರದಿಯಾಗಿದೆ. ಬಳ್ಳಾರಿ ನಗರದ ಕೌಲ್ ಬಜಾರ್ ಸುತ್ತಲಿನ ಪ್ರದೇಶದಲ್ಲಿ ಈ ಘಟನೆ ನಡೆದಿದ್ದು, ಬಳ್ಳಾರಿ ನಗರ ಒಂದರಲ್ಲಿಯೇ ಸುಮಾರು 20 ಸಾವಿರ ಬೀದಿ ನಾಯಿಗಳಿದ್ದು ಇವುಗಳ ಆರ್ಭಟಕ್ಕೆ ಸಾಕಷ್ಟು ಮಕ್ಕಳು ವೃದ್ಧರು ದಾಳಿಗೆ ತುತ್ತಾದ ಪ್ರಸಂಗಗಳು ನಡೆಯುತ್ತಿರುತ್ತವೆ.

ಈ ಬೀದಿ ನಾಯಿಗಳಿಗೆ ಸಂತಾನ ಹರಣ ಚಿಕಿತ್ಸೆಯನ್ನು ಮಾಡಿಸಲು ಸರ್ಕಾರ ಕೋಟಿ ಕೋಟಿ ಹಣವನ್ನು ಖರ್ಚು ಮಾಡಿದ್ದರು ಸಹ ಇವುಗಳನ್ನು ಕಡಿಮೆಗೊಳಿಸಲು ಸಾಧ್ಯವಾಗುತ್ತಿಲ್ಲ, ಬಳ್ಳಾರಿಯ ಬೀದಿ ನಾಯಿಗಳ ಕುರಿತು ಜಿಲ್ಲೆಯ ಅಧಿಕಾರಿಗಳಿಗೆ ಹಲವು ಬಾರಿ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದರು ಸಹ ಕ್ರಮ ನಿರ್ಲಕ್ಷ್ಯ ವಹಿಸಿದ್ದರಿಂದಲೇ ಈ ಘಟನೆ ನಡೆದಿದ್ದು, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದರ ಜೊತೆಗೆ ಬಳ್ಳಾರಿ ನಗರದಲ್ಲಿ ಈ ಬೀದಿ ನಾಯಿ ಹಾವಳಿಯನ್ನು ತಡೆಗಟ್ಟಲು ಮತ್ತು ಈ ನಾಯಿ ಕಚ್ಚಿದ ಘಟನೆಯಲ್ಲಿ ಎಲ್ಲಾ ಗಾಯಾಳುಗಳಿಗೆ ಸೂಕ್ತ ಆರೋಗ್ಯ ಚಿಕಿತ್ಸೆಯನ್ನು ನೀಡಲು ಕ್ರಮ ಕೈಗೊಳ್ಳುವಂತೆ ಈ ಮೂಲಕ ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಉತ್ತರ:** ಬಳ್ಳಾರಿ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ದಿನಾಂಕ:07.02.2023ರಂದು ವಾರ್ಡನಂ:30ರ ವಟ್ಟಪ್ಪ ಗೇರಿ ವ್ಯಾಪ್ತಿಯಲ್ಲಿ ಬೀದಿನಾಯಿ 21 ಜನಕ್ಕೆ ಕಚ್ಚಿ ಇವರುಗಳು ಬಳ್ಳಾರಿ ವಿಮ್ಸ್ ಆಸ್ಪತ್ರೆಯಲ್ಲಿ ದಾಖಲಾಗಿರುತ್ತಾರೆ, ಅದೇ ದಿನ ಮಾನ್ಯ ಶಾಸಕರು, ಜಿಲ್ಲಾಧಿಕಾರಿಗಳು, ಪಾಲಿಕೆಯ ಪೂಜ್ಯ ಮಹಾಪೌರರು, ಆಯುಕ್ತರು ಹಾಗೂ ವಾರ್ಡ್ ಸದಸ್ಯರು ಆಸ್ಪತ್ರೆಗೆ ಭೇಟಿ ನೀಡಿ ವಿಮ್ಸ್ ನಿರ್ದೇಶಕರೊಂದಿಗೆ ಹಾಗೂ ವೈದ್ಯರೊಂದಿಗೆ ಸಮನ್ವಯ ಸಾಧಿಸಿ ಪ್ರತಿನಿತ್ಯ ಸದರಿಯವರುಗಳ ಆರೋಗ್ಯಸ್ಥಿತಿ ಕುರಿತು ವಿಚಾರಿಸಲಾಗುತ್ತಿದೆ.

- ಮುಂದುವರೆದು, ನಾಯಿ ಕಚ್ಚಿದ ಸಂತ್ರಸ್ತರಿಗೂ ಸಹ ಅವರ ಆರೋಗ್ಯವನ್ನು ವಿಚಾರಿಸಲಾಗುತ್ತಿದ್ದು, ಮೇಲಿನ ಎಲ್ಲಾ 21 ಜನ ಆರೋಗ್ಯವಾಗಿದ್ದು, ಇಂದಿನವರೆಗೂ, ಒಟ್ಟು 3 ಡೋಸ್ ವ್ಯಾಕ್ಸಿನ್‌ಗಳು ಮುಕ್ತಾಯವಾಗಿದ್ದು, ಇನ್ನು ಎರಡು ಡೋಸ್ ವ್ಯಾಕ್ಸಿನ್‌ಗಳು ಬಾಕಿ ಇರುತ್ತವೆ. ಈ ಕುರಿತು ಪ್ರತಿನಿತ್ಯ ವಿಮ್ಸ್ ನಿರ್ದೇಶಕರೊಂದಿಗೆ ಸಂವಹನ ನಡೆಸುತ್ತಿದ್ದು ಪ್ರಸ್ತುತ, ಎಲ್ಲರು ಆರೋಗ್ಯವಾಗಿರುತ್ತಾರೆ.
- ಸದರಿ ಘಟನೆ ನಡೆದ ಸ್ಥಳದಲ್ಲಿ ಪಾಲಿಕೆಯ ಆಯುಕ್ತರ ನೇತೃತ್ವದಲ್ಲಿ ತಂಡ ರಚಿಸಿ ನಾಯಿಯನ್ನು ಪತ್ತೆಹಚ್ಚಲು ಕ್ರಮಕೈಗೊಳ್ಳಲಾಗಿದೆ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಮನೆ ಮನೆಗೆ ಭೇಟಿ ನೀಡಿ ಸಮೀಕ್ಷೆ ನಡೆಸಿ ನಾಯಿ ಕಚ್ಚಿದ ತಕ್ಷಣ ತೆಗೆದು ಕೊಳ್ಳಬೇಕಾದ ಪ್ರಥಮ ಚಿಕಿತ್ಸೆ ಹಾಗೂ ಇಂತಹ ಸನ್ನಿವೇಶಗಳು ಜರುಗದಂತೆ ತೆಗೆದುಕೊಳ್ಳಬೇಕಾದ ಮುಂಜಾಗೃತ ಕ್ರಮಗಳ ಕುರಿತು ಅರಿವು ಮೂಡಿಸಲಾಗಿದೆ. ಸದರಿ ಪ್ರದೇಶದಲ್ಲಿ ಸುಮಾರು 15 ರಿಂದ 20 ನಾಯಿಗಳನ್ನು ಹಿಡಿದು ಸಂತಾನ ಹರಣ ಶಸ್ತ್ರಚಿಕಿತ್ಸೆ ಹಾಗೂ ಆ್ಯಂಟಿ ರೇಬೀಸ್ ವ್ಯಾಕ್ಸಿನ್ ಹಾಕಿಸಲು ಕ್ರಮವಹಿಸಲಾಗಿದೆ.

- ಸಾರ್ವಜನಿಕರಿಗೆ ಹಾಗೂ ಮಾಂಸದ ಅಂಗಡಿಗಳ ಮಾಲೀಕರಿಗೆ ಇಂತಹ ಘಟನೆಗಳು ಜರುಗದಂತೆ ಮುಂಜಾಗೃತ ಕ್ರಮಗಳನ್ನು ವಹಿಸಲು ಪಾಲಿಕೆಯ ಮನೆ ಮನೆ ಕಸ ಸಂಗ್ರಹಣಾ ವಾಹನಗಳ ಮೂಲಕ ಆಡಿಯೋ ಜಿಂಗಲ್ಸ್‌ಗಳನ್ನು ಪ್ರಚುರಪಡಿಸಲಾಗುತ್ತಿದೆ.
- ಬಳ್ಳಾರಿ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ 2021-22ನೇ ಸಾಲಿನಲ್ಲಿ ಸಾಮಾನ್ಯ ನಿಧಿಯಡಿಯಲ್ಲಿ ಒಟ್ಟು ರೂ.64,16,535/-ಗಳ ವೆಚ್ಚದಲ್ಲಿ ಒಟ್ಟು 4222 ನಾಯಿಗಳಿಗೆ ಈಗಾಗಲೇ ಸಂತಾನ ಹರಣ ಶಸ್ತ್ರಚಿಕಿತ್ಸೆ ಹಾಗೂ ಆ್ಯಂಟಿ ರೇಬೀಸ್ ವ್ಯಾಕ್ಸಿನ್ ಹಾಕಿಸಲು ಕ್ರಮಕೈಗೊಳ್ಳಲಾಗಿದ್ದೆ.
- ಪಶು ಸಂಗೋಪನಾ ಇಲಾಖೆಯ ಸಮೀಕ್ಷೆ ಪ್ರಕಾರ ಪ್ರಸ್ತುತ ಬಳ್ಳಾರಿ ನಗರ ವ್ಯಾಪ್ತಿಯಲ್ಲಿ ಒಟ್ಟು 20,000 ಬೀದಿನಾಯಿಗಳು ಇರುತ್ತವೆಂದು ಅಂದಾಜಿಸಲಾಗಿದ್ದು. ಅದರಂತೆ, ಬಾಕಿ ಇರುವ ಇನ್ನು 16,000 ಬೀದಿನಾಯಿಗಳಿಗೆ 2022-23ನೇ ಸಾಲಿನಲ್ಲಿ ಒಟ್ಟು ರೂ.3,07,62,600/-ವೆಚ್ಚದಲ್ಲಿ ಸಂತಾನ ಹರಣ ಶಸ್ತ್ರಚಿಕಿತ್ಸೆ ಹಾಗೂ ಆ್ಯಂಟಿ ರೇಬೀಸ್ ವ್ಯಾಕ್ಸಿನ್ ಹಾಕಿಸಲು ಈಗಾಗಲೇ ದಿನಾಂಕ:07.02.2023ರಂದು ಟೆಂಡರ್ ಕರೆಯಲಾಗಿದ್ದು, ಟೆಂಡರ್ ಸಲ್ಲಿಸಲು ದಿನಾಂಕ:23.02.2023 ಕೊನೆಯ ದಿನಾಂಕವಾಗಿದ್ದು, ತುರ್ತಾಗಿ ಈ ಬಗ್ಗೆ ಕ್ರಮವಹಿಸಲಾಗುತ್ತಿದೆ.
- ಅದೇ ರೀತಿ ತುರ್ತಾಗಿ ಬೀದಿನಾಯಿಗಳ ಹಾವಳಿಗಳನ್ನು ತಡೆಗಟ್ಟಲು, ಸಾರ್ವಜನಿಕರ ದೂರುಗಳಿಗೆ ಸ್ಪಂದಿಸಲು ಹಾಗೂ ಬೀದಿನಾಯಿಗಳ ಹಾವಳಿ ಹೆಚ್ಚಾಗಿರುವ ಪ್ರದೇಶಗಳಲ್ಲಿ ಹಾವಳಿ ತಡೆಗಟ್ಟಲು ಒಟ್ಟು 300 ಬೀದಿನಾಯಿಗಳಿಗೆ ಸಂತಾನ ಹರಣ ಶಸ್ತ್ರಚಿಕಿತ್ಸೆ ಹಾಗೂ ಆ್ಯಂಟಿ ರೇಬೀಸ್ ವ್ಯಾಕ್ಸಿನ್ ಹಾಕಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ 1999ರನ್ವಯ ಕೆ.ಕ್ಯೂ ಮೂಲಕ ರೂ 4.9ಲಕ್ಷಗಳ ವೆಚ್ಚದಲ್ಲಿ ಈಗಾಗಲೇ ದಿನಾಂಕ:07.02.2023ರಂದು Human World for Animals ಎಂಬ ಸರ್ಕಾರೇತರ ಸಂಸ್ಥೆಗೆ ಕಾರ್ಯಾದೇಶ ನೀಡಲಾಗಿದ್ದು, ಈಗಾಗಲೇ ಸಂತಾನ ಹರಣ ಶಸ್ತ್ರಚಿಕಿತ್ಸೆ ಹಾಗೂ ಆ್ಯಂಟಿ ರೇಬೀಸ್ ವ್ಯಾಕ್ಸಿನ್ ಕಾರ್ಯವು ಪ್ರಗತಿಯಲ್ಲಿದೆ.
- ನಿರ್ದೇಶಕರು, ವಿಮ್ಸ್ ಬಳ್ಳಾರಿ ಇವರು ಸದರಿ ನಾಯಿ ಕಡಿತಕ್ಕೆ ಒಳಗಾದವರ ಬಗ್ಗೆ ನಿಗಾವಹಿಸಿ ಸೂಕ್ತ ಚಿಕಿತ್ಸೆ ನೀಡಲು ಹಾಗೂ ಅವಶ್ಯಕವಿರುವ ಔಷಧಿಗಳನ್ನು ಶೇಖರಿಸಿ ಯಾವುದೇ ತೊಂದರೆಯಾಗದಂತೆ, ಕ್ರಮವಹಿಸಲು ಕರ್ತವ್ಯನಿರತ ವೈದ್ಯರಿಗೆ, ವೈದ್ಯಕೀಯ ಅಧೀಕ್ಷಕರಿಗೆ, ಶಸ್ತ್ರ ಚಿಕಿತ್ಸಾ ವಿಭಾಗದ ಮುಖ್ಯಸ್ಥರಿಗೆ ಹಾಗೂ ಶುಶ್ರೂಷಕ ಅಧೀಕ್ಷಕರಿಗೆ ಕಛೇರಿ ಆದೇಶದ ಮೂಲಕ ಸೂಚಿಸಿರುತ್ತಾರೆ. ಅದರಂತೆ, ರೋಗಿಗಳಿಗೆ ಹಾಗೂ ನಗರದ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಕ್ರಮವಹಿಸಲಾಗುತ್ತಿದೆ.

**ಸಂಖ್ಯೆ**: ನಅಇ 07 ಎಬಿಸಿ 2023 (ಇ)

(ಬಿ. ಎ ಬಸವರಾಜ)
ಮಾನ್ಯ ನಗರಾಭಿವೃದ್ಧಿ ಸಚಿವರು
(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು